ರಾಘವೇಂದ್ರ ಔರಾದಕರ್, ಐ.ಪಿ.ಎಸ್.
ಹೆಚ್ಚುವರಿ ಆರಕ್ಷಕ ಮಹಾ ನಿರ್ದೇಶಕರು
ನೇಮಕಾತಿ ಮತ್ತು ತರಬೇತಿ
Raghavendra Auradkar, I.P.S.
Addl. Director General of Police
Recruitment and Training.

KARNATAKA STATE POLICE

Ph. : (O) 080-22343641
080-22943650
Fax : 080-22942261
Mob : 9480800102
ಕಾರ್ಲಟನ್ ಭವನ, ಅರಮನೆ ರಸ್ತೆ
ಬೆಂಗಳೂರು-560 001
Carlton House, Palace Road
Bengaluru-560 001
email : adgprntcod@ksp.gov.in

ಅಸ.ಪ. ಸಂ: 6/ನೇಮಕಾತಿ-2/2015-16 ದಿನಾಂಕ: 15ನೇ ಏಪ್ರಿಲ್ 2017.

Dear Saleem,

ವಿಷಯ: ಪೋಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್) (ಪುರುಷ & ಮಹಿಳಾ) ಹುದ್ದೆಗಳಿಗೆ 2015ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕವನ್ನು ಹಿಂತಿರುಗಿಸುವ ಕುರಿತು.

ಉಲ್ಲೇಖ:
1. ಅಧಿಸೂಚನೆ ಸಂಖ್ಯೆ: 06/ನೇಮಕಾತಿ-2/2015-16, ದಿನಾಂಕ: 05.10.2015.
2. ಸರ್ಕಾರದ ಪತ್ರ ಸಂಖ್ಯೆ: ಒಇ 273 ಪೊಸಇ 2015, ದಿನಾಂಕ: 06.08.2016
3. ಈ ಕಛೇರಿಯ ಜ್ಞಾಪನ ಸಮ ಸಂಖ್ಯೆ, ದಿ: 18.11.2016 ಹಾಗೂ ಎಸ್‌ಪಿಗಳಿಗೆ ಕಳುಹಿಸಿರುವ ಎಸ್‌ಎಂಎಸ್ ಹಾಗೂ ವಾಟ್ಸ್ ಆಪ್ ಮೆಸೇಜ್‌ಗಳು.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿಮ್ಮ ವಲಯದ ಚಿತ್ರದುರ್ಗ, ದಾವಣಗೆರೆ, ಹಾವೇರಿ, ಶಿವಮೊಗ್ಗ ಈ ಜಿಲ್ಲೆಯ ಎಸ್‌ಪಿಯವರಿಗೆ ಸದರಿ ಜ್ಞಾಪನವನ್ನು ಕಳುಹಿಸಲಾಗಿತ್ತು ಹಾಗೂ ದಿನಾಂಕ: 10.04.2017 ರಂದು ವಾಟ್ಸ್ ಆಪ್ ಸಂದೇಶ ಸಹ ಕಳುಹಿಸಲಾಗಿತ್ತು. ಈ ಎಲ್ಲಾ ಜಿಲ್ಲೆಯ ಎಸ್‌ಪಿರವರು ಕ್ರಮ ಕೈಗೊಳ್ಳುವ ಬಗ್ಗೆ **"Yes Sir"** ಎಂದು ಉತ್ತರ ಕಳುಹಿಸಿರುತ್ತಾರೆ. ಈ ವಿಷಯದ ಬಗ್ಗೆ ಸಂಬಂಧಿಸಿದ ಎಸ್‌ಪಿಯವರಿಗೆ ಕೂಡಲೆ ಕ್ರಮಕೈಗೊಳ್ಳಲು ಸೂಚಿಸಲು ತಿಳಿಸಿದೆ. ಅದಲ್ಲದೆ ಕೆಲವೊಂದು ಜಿಲ್ಲೆಯಿಂದ ಅನಾವಶ್ಯಕವಾಗಿ ಅಭ್ಯರ್ಥಿಗಳಿಗೆ ಎಸ್‌ಎಂಎಸ್ ಕಳುಹಿಸಲು ಕೋರಿಕೆ ಸಲ್ಲಿಸಲಾಗುತ್ತಿದೆ. ಇದು ಕೇವಲ ಸಮಯ ಕಳೆಯುವ ಸಾಧನ ಆಗಿದ್ದು ಅಭ್ಯರ್ಥಿಗಳಿಗೆ ಹಣ ಬಟವಾಡೆ ಮಾಡುವುದರಲ್ಲಿ ವಿಳಂಬ ಮಾಡುವ ನೆಪವಾಗಿರುತ್ತದೆ. ಒಬ್ಬ ಜಿಲ್ಲಾ ಎಸ್‌ಪಿಯವರಿಗೆ ಕನಿಷ್ಠ ಒಂದು ಸಾವಿರ ಸಿಬ್ಬಂದಿಯವರು ಲಭ್ಯವಿದ್ದು, ವಿವಿಧ ಠಾಣೆಗಳ ಸರಹದ್ದಿನಲ್ಲಿ ಕ್ರಮ ಕೈಗೊಳ್ಳುವ ಅಧಿಕಾರ ಕೂಡ ಇರುತ್ತದೆ. ಆದರೆ ಸಂಬಂಧಿಸಿದ ಜಿಲ್ಲಾ ಪೋಲೀಸ್ ಅಧಿಕಾರಿಗಳು ನೆಪಗಳನ್ನು ಹುಡುಕಿ ಕಾಲಾಹರಣ ಮಾಡುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ದಿನಾಂಕ: 30.04.2017ರ ಒಳಗೆ ಕ್ರಮ ಆಗದಿದ್ದಲ್ಲಿ ಡಿಜಿ & ಐಜಿಪಿ ಯವರ ಗಮನಕ್ಕೆ ಸಂಬಂಧಿಸಿದ ಎಸ್‌ಪಿಯವರ ವಿರುದ್ಧ ವರದಿ ಸಲ್ಲಿಸಲಾಗುವುದು ಎಂದು ನಿಮಗೆ ಸೂಚಿಸಲಾಗುತ್ತಿದೆ. ವಿಷಯವನ್ನು ಗಂಭೀರವಾಗಿ ಪರಿಗಣಿಸಲು ಕೋರಿದೆ. ಈ ಹಿಂದೆ ಕಳುಹಿಸಿರುವ ಜ್ಞಾಪನದ ಪ್ರತಿ ಲಗತಿಸಿದೆ.

With best wishes,

ತಮ್ಮ ವಿಶ್ವಾಸಿ

15/4/2017

CB
D.O
Put up to all S.Ps.
letter
17/4/17

ಶ್ರೀ ಎಂ.ಎ. ಸಲೀಮ್, ಐಪಿಎಸ್,
ಪೋಲೀಸ್ ಮಹಾ ನಿರೀಕ್ಷಕರು,
ಪೂರ್ವ ವಲಯ,
ದಾವಣಗೆರೆ.

**ಕಾರ್ಲಟನ್ ಭವನ, ಅರಮನೆ ರಸ್ತೆ, ಬೆಂಗಳೂರು ರವರ ಅವರ ಕಛೇರಿಯ ಜ್ಞಾಪನ ಪತ್ರ ಸಂಖ್ಯೆ. 06 : ನೇಮಕಾತಿ–2 : 2015–16 ದಿನಾಂಕ. 18–11–2016 ರಲ್ಲಿ 2015 ರ ಸಾಲಿನ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ (ಸಿವಿಲ್) (ಪುರುಷ & ಮಹಿಳಾ) ಹುದ್ದೆಯ ನೇಮಕಾತಿಗಾಗಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಶುಲ್ಕವನ್ನು ಮರು ಪಾವತಿಸಲು/ಹಿಂತಿರುಗಿಸಲು ತಿಳಿಸಿದ್ದಾರೆ. ಹಾವೇರಿ ಜಿಲ್ಲೆಯಲ್ಲಿ ಒಟ್ಟು 2353 ಜನ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕವನ್ನು ಮರು ಪಾವತಿಸಲು ರೂ.4,54,250/–ಗಳನ್ನು ಚಕ್ ಮೂಲಕ ಪಾವತಿಸಿದ್ದಾರೆ.**